ಶ್ರೀ ಧರ್ಮಸಿಂಗ್ : ಉಪಕುಲಪತಿಗಳು ಮಾಡಬೇಕು, ಕುಲಪತಿಗಳಿಗೆ ಹೇಳಬಹುದು, ಇದು ಯಾವ context ನಲ್ಲಿ Education Principal Secretaryಗೆ ಬರೆದಿದ್ದಾರೆ, ಆ ಇಬ್ಬರನ್ನೂ ಕರೆಸಿ ಮಾತನಾಡುತ್ತೇನೆ. ಏನಪ್ಪ? ಏಕೆ ಪತ್ರವನ್ನು ಬರೆದೆ? ಸರ್ಕಾರದ ಆಜ್ಞೆ ಇದೆ. ಏಕೆ ಹಾಗೆ ಬರೆದೆ? ಏನಾಗಿದೆ? ಏನು ವ್ಯತ್ಯಾಸವಾಗಿದೆ ಎಂದು ಅವರನ್ನು ಕರೆಸಿ ನಾನು ಮಾತನಾಡುತ್ತೇನೆ. ಇಬ್ಬರನ್ನೂ ಕರೆಸಿ ಮಾತನಾಡಿ ನೋಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಕಾಡಮಿಕ್ ಕೌನ್ಸಿಲ್‌ಗೆ ಮಾಡುವುದರಲ್ಲಿ 9 ರಲ್ಲಿ ಎರಡು ವೈಲೇಟ್ ಆಗಿದೆ. ಏಳು ಜನಕ್ಕೆ ಮಾಡಿರುವುದು ಸರಿಯಲ್ಲ ಎಂಬುದು ಒಂದು ವಿಚಾರ ಇನ್ನೊಂದು ಸಿಂಡಿಕೇಟ್‌ಗೆ ಮಾಡಿರುವಂಥದ್ದು ಎಲ್ಲವನ್ನೂ ನಮ್ಮ ಕರ್ನಾಟಕ ಯೂನಿವರ್ಸಿಟಿ ಆ್ಯಕ್ಟ್‌ನ್ನು ವೈಲೇಟ್ ಮಾಡಿ ಎಜುಕೇಷನಿಸ್ಟ್ ಅಲ್ಲದೇ ಇರುವವರನ್ನು ನೇಮಕ ಮಾಡಿದ್ದಾರೆ ಎಂಬುದು ಅವರು ಬರೆದಿರುವಂಥ ಪತ್ರದ ಸಾರಾಂಶ.

ಶ್ರೀ ಧರ್ಮಸಿಂಗ್ : ಏನು ಪತ್ರವನ್ನು ಬರೆದಿದ್ದಾರೆ ಅದರ ಬಗ್ಗೆ I will call the vice-chancellor and ಅದರ ಬಗ್ಗೆ Principal Secretary, Education ಗಳಿಗೆ, ಅವರಿಬ್ಬರನ್ನು ಕರೆಸಿ ಏನಿದೆ ನೋಡಿ ಅನಂತರ ಕ್ರಮ ತೆಗೆದುಕೊಳ್ಳುತ್ತೇನೆ.

(ವಿರೋಧ ಪಕ್ಷದ ಸದಸ್ಯರುಗಳು ಬಾವಿಯಿಂದ ತಮ್ಮತಮ್ಮ ಸ್ಥಾನಕ್ಕೆ ಮರಳಿದರು)

8. ವರದಿಯನ್ನೊಪ್ಪಿಸುವುದು

ಶ್ರೀ ಎನ್.ವೈ. ಗೋಪಾಲಕೃಷ್ಣ(ಉಪಾಧ್ಯಕ್ಷರು) : ಅರ್ಜಿಗಳ ಸಮಿತಿಯ ಒಂದನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

(ವರದಿಯನ್ನು ಒಪ್ಪಿಸಲಾಯಿತು)

ಶ್ರೀ ಬಿ.ಎಸ್. ಯಡಿಯೂರಪ್ಪ : ಬಾಗಲಕೋಟೆ ಪ್ಯಾಕೇಜ್‌ನ ಬಗ್ಗೆ ನಾಳೆಯಾದರೂ ಉತ್ತರ ಕೊಡಿ.

ಶ್ರೀ ಸಿದ್ಧರಾಮಯ್ಯ : ಇದಾದಮೇಲೆ.

9. ವಿತ್ತೀಯ ಕಾರ್ಯಕಲಾಪಗಳು

ಶ್ರೀ ಸಿದ್ಧರಾಮಯ್ಯ(ಉಪ ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ 2005–06ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೆಯ ಕಂತನ್ನು) ಮಂಡಿಸುತ್ತಿದ್ದೇನೆ. (ಅನುಬಂಧ–III (ಪ್ರಸ್ತಾವ ಮಂಡಿಸಲ್ಪಟ್ಟಿತು.)

10. ಪ್ರಕಟಣೆ.

(ಅ) 2005ನೇ ಸಾಲಿನ ಕರ್ನಾಟಕ ರಾಜ್ಯ ವಿಧಾನ ಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ವಿಧೇಯಕದ ಬಗ್ಗೆ

ಉಪಾಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತ 2005ನೇ ಸಾಲಿನ ಕರ್ನಾಟಕ ರಾಜ್ಯ ವಿಧಾನ ಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ವಿಧೇಯಕವನ್ನು ಈ ದಿನ 1ನೇ ಆಗಸ್ಟ್ 205 ರಂದು ಯಾವುದೇ ತಿದ್ದುಪಡಿಯಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಆ) ಬೀಜ ಮಸೂದೆಯನ್ನು ಮತ್ತು ರೈತರ ಹಕ್ಕು ಕುರಿತು ಸಂವಾದ ಕಾರ್ಯಕ್ರಮವನ್ನು ಶಾಸಕರ ಭಾವನದ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಿರುವ ಬಗ್ಗೆ.

ಉಪಾಧ್ಯಕ್ಷರು : ಕರ್ನಾಟಕ ವಿಧಾನ ಮಂಡಲ ಸಂವಾದ ಕಾರ್ಯಕ್ರಮ, ಬೀಜ ಮಸೂದೆ 2004 ಮತ್ತು ರೈತರ ಹಕ್ಕು. ವಿಚಾರ ಮಂಡಿಸುವವರು ಡಾ: ವನಜಾರಾವ್‌ಪ್ರಸಾದ್, ನಿರ್ದೇಶಕರು

ಗ್ರೀನ್ ಪ್ರತಿಷ್ಠಾನ, ಡಾ: ಜಿ.ಎನ್.ಎಸ್. ರೆಡ್ಡಿ ಉಪಾಧ್ಯಕ್ಷರು, ಪ್ರೊ: ರಮೇಶ್, ನ್ಯಾಷನಲ್ ಲಾ ಸ್ಕೂಲ್ ಬೆಂಗಳೂರು, ಶ್ರೀ ಜಿ. ಕೃಷ್ಣ ಪ್ರಸಾದ್ ಗ್ರೀನ್ ಪ್ರತಿಷ್ಠಾನ ಬೆಂಗಳೂರು ಇವರು ಈ ಒಂದು ಬೀಜ ಮಸೂದೆ ಸಂವಾದ ಕಾರ್ಯಕ್ರಮವನ್ನು ಶಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಿರುತ್ತಾರೆ. ಎಲ್ಲಾ ಶಾಸಕರು ಈ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಕೋರುತ್ತೇನೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 10 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 2ನೇ ಆಗಸ್ಟ್ ಮಾಹೆ 2005ರ ಮಂಗಳವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

11. ಅನುಬಂಧ-I, II, III

ಅನುಬಂಧ - I,

20.7.05 ಚುಕ್ಕೆ ಗುರುತಿನ ಪ್ರಶ್ನೋತ್ತರಗಳು:

ಸ್ವಚ್ಛಗ್ರಾಮ ಯೋಜನೆಯ ವಿವರ.

496 (6001) ಶ್ರೀ ಪಾಟೀಲ್ ಎಂ.ವೈ (ಅಫ್ಜಲ್‌ಪುರ್) ಮಾನ್ಯ ಗ್ರಾ.ನೀ.ಸ. ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ 2004-05ನೇ ಸಾಲಿನಲ್ಲಿ ಸ್ವಚ್ಛಗ್ರಾಮ ಯೋಜನೆಯಲ್ಲಿ ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ;

ಆ) ಈಗಾಗಲೇ ಮಂಜೂರಾದ ಕಾಮಗಾರಿಗಳು ಪ್ರಾರಂಭವಾಗಿದೆಯೇ;

ಇ) ಈ ಕಾಮಗಾರಿಗಳಿಗಾಗಿ, ಸಾರ್ವಜನಿಕ ವಂತಿಗೆ ಹಣ ಸಂದಾಯ ಮಾಡಿದರೂ ಕೂಡ ಈವರೆವಿಗೂ ಪ್ರಾರಂಭವಾಗದಿರಲು ಕಾರಣವೇನು?

ಶ್ರೀ ಬಿ. ಸತ್ಯನಾರಾಯಣ (ಮಾನ್ಯ ಗ್ರಾ.ನೀ.ಸ. ರಾಜ್ಯ ಸಚಿವರು):

ಅ) 2005-05ರ ಸಾಲಿನಲ್ಲಿ 104 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ಆ) ಮಂಜೂರಾದ ಗ್ರಾಮಗಳಲ್ಲಿ ಕಾಮಗಾರಿ ಅನುಷ್ಠಾನಗೊಳಿಸಲು ಟೆಂಡರಿಂಗ್ ಪ್ರಕ್ರಿಯೆ ನಡೆದಿದೆ.

ಇ) ಸಮುದಾಯ ವಂತಿಗೆ ಹೊರತುಪಡಿಸಿ, ಪ್ರತಿ ಗ್ರಾಮಕ್ಕೆ ಸರ್ಕಾರ ಈಗಾಗಲೇ ರೂ 1.32 ಲಕ್ಷದಂತೆ ಒಟ್ಟು ರೂ 137.20 ಲಕ್ಷ ಬಿಡುಗಡೆ ಮಾಡಿದೆ. ಹಿಂದಿನ ಗ್ರಾಮ ಪಂಚಾಯತ್‌ಗಳ ಅವಧಿ ಮುಗಿದು ಚುನಾಯಿತ ನೂತನ ಅಧ್ಯಕ್ಷರುಗಳ ಅವಧಿ ಮುಗಿದು ಚುನಾಯಿತ ನೂತನ ಅಧ್ಯಕ್ಷರುಗಳು ಮತ್ತು ಸದಸ್ಯರುಗಳನ್ನೊಳಗೊಂಡ ಗ್ರಾಮ ಪಂಚಾಯತ್‌ಗಳು ಕಳೆದ 4 ತಿಂಗಳಲ್ಲಿ ಅಸ್ಥಿತ್ವಕ್ಕೆ ಬಂದಿರವುದರಿಂದ ಟೆಂಡರ್ ವ್ಯವಸ್ಥೆ ಮೂಲಕ ಕೆಲಸ ಪ್ರಾರಂಭಿಸುವಲ್ಲಿ ಸ್ವಲ್ಪ ವಿಳಂಬವಾಗಿದೆ. ಸದ್ಯದಲ್ಲಿಯೇ ಅನುಮೋದನೆಯಾದ ಎಲ್ಲಾ ಗ್ರಾಮಗಳಲ್ಲಿ ಕಾಮಗಾರಿಗಳು ಪ್ರಾರಂಭವಾಗುತ್ತವೆ.

ಕುಡಿಯುವ ನೀರಿನ ಕೊರತೆ ಹಾಗೂ "ಕುಗ್ರಾಮ-ಸುಗ್ರಾಮ" ಯೋಜನೆ ಅನುಷ್ಠಾನ

497 (5722) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) ಮಾನ್ಯ ಗ್ರಾ.ನೀ.ಸ. ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಶಿಗ್ಗಾಂವ-ಸವಣೂರ ತಾಲ್ಲೂಕುಗಳ ಗ್ರಾಮೀಣ ಪ್ರದೇಶಗಳಲ್ಲಿ ಕೊಳಚೆ ಬಾವಿ ನೀರಿನ ಮಟ್ಟ ಕುಸಿದಿದ್ದು ಕುಡಿಯುವ ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ;